ಎಂದು ಮುಖ್ಯಮಂತ್ರಿ ಮನವಿ ಮಾಡಿಕೊಂಡರು.

ಪಾದಯಾತ್ರೆಗೆ ರಾಷ್ಟ್ರೀಯ ಪಕ್ಷ ಬೆಂಬಲ ನೀಡಿದ್ದರೂ ಹತ್ತು ಸಾವಿರಕ್ಕಿಂತ ಹೆಚ್ಚು ಜನರು ಸೇರುವುದಿಲ್ಲ ಎಂದು ಗುಪ್ತಚರ ವಿಭಾಗದ ಅಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದರು. ಸರ್ಕಾರ ಪಾದಯಾತ್ರೆ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.

* * *

ಮೂರು ತಿಂಗಳಿಗೂ ಹೆಚ್ಚು ಕಾಲ ಅಪ್ಪನನ್ನು ಹುಡುಕಾಡಿದ ಪ್ರಭುದೇವರ ಮಗ ನಮ್ಮ ಅಪ್ಪ

ಬದುಕಿರುವ ಸಾಧ್ಯತೆ ಇಲ್ಲ. ಅವರನ್ನು ಹುಡುಕುವ ಪ್ರಯತ್ನವನ್ನು ನಿಲ್ಲಿಸಿದ್ದೇನೆ...' ಎಂದು ಪತ್ರಿಕಾ ಹೇಳಿಕೆ ನೀಡಿದರು. ಈ ಹೇಳಿಕೆಯನ್ನು ಓದಿದವರು ಹತಾಶರಾದರು.

* * *

ಪ್ರಭುದೇವ ಅವರ ಸ್ವಗ್ರಾಮದಿಂದ ಸೈಕಲ್ ಜಾಥಾ ಆರಂಭವಾಯಿತು. ಅದನ್ನು ಉದ್ಘಾಟಿಸಿದ ಸ್ಥಳೀಯ ಮಠದ ಸ್ವಾಮೀಜಿ ಭಾಷಣದಲ್ಲಿ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬ ಕವಿವಾಣಿಯನ್ನು ನೆನಪು ಮಾಡಿಕೊಂಡು ಜಾಥಾ ರಾಜಧಾನಿ ತಲುಪುವ ಹೊತ್ತಿಗೆ ಸಾವಿರಾರು ಜನರು ಅದರಲ್ಲಿ ಸೇರಿಕೊಂಡು ಪ್ರವಾಹದ ಸ್ವರೂಪ ಪಡೆಯಲಿದೆ. ಜನ ಪ್ರವಾಹದಲ್ಲಿ ಪ್ರಭುತ್ವಗಳು ಕೊಚ್ಚಿಹೋಗುತ್ತೆ ಎಂದು ಹೇಳಿದರು.



ಅದೇ ದಿನ ಎಲ್ಲ ಜಿಲ್ಲೆಗಳಲ್ಲೂ ಸೈಕಲ್ ಜಾಥಾ ಆರಂಭವಾದವು. ಹತ್ತನ್ನೆರಡು ಮಂದಿ ಸೈಕಲ್ ಸವಾರರಿದ್ದ ಜಾಥಾಗಳ ರಕ್ಷಣೆಗೆ ಒಂದೊಂದು ಪೊಲೀಸ್ ವ್ಯಾನ್ ನಿಯೋಜನೆ ಆಯಿತು. ಜಾಥಾ ಮುಕ್ತಾಯಗೊಳ್ಳುವ ಹೊತ್ತಿಗೆ ಪ್ರಭುದೇವ ಅವರನ್ನು ಸರ್ಕಾರ ಪತ್ತೆ ಮಾಡಿ ಜನರ ಮುಂದೆ ತಂದು ನಿಲ್ಲಿಸದಿದ್ದರೆ ಸರ್ಕಾರ ಅಧಿಕಾರದಲ್ಲಿರುವ ನೈತಿಕ ಹಕ್ಕು ಕಳೆದುಕೊಳ್ಳುತ್ತದೆ ಎಂದು ವಿರೋಧ ಪಕ್ಷಗಳು ಹೇಳಿದವು.

ಜಾಥಾ ರಾಜಧಾನಿಯ ಗಡಿಗೆ ಬಂದ ನಂತರ ಪರಿವರ್ತನೆಯಾಗುವ ಪಾದಯಾತ್ರೆಯಲ್ಲಿ ಹತ್ತು ಸಾವಿರ ಜನ ಭಾಗವಹಿಸುತ್ತಾರೆ ಎಂದು ಪ್ರಭುದೇವ ಅವರ ಅಭಿಮಾನಿಗಳು ಪತ್ರಿಕಾ ಹೇಳಿಕೆ ನೀಡಿದರು. ಪಾದಯಾತ್ರೆಯಲ್ಲಿ ಸಾಹಿತ್ಯಾಸಕ್ತರು, ಸಾಹಿತಿ, ಕಲಾವಿದರು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಸೋಷಿಯಲ್ ಮೀಡಿಯಾಗಳ ಮೂಲಕ ಮನವಿ ಮಾಡಿಕೊಂಡರು. ಪಾದಯಾತ್ರೆಗೆ ಬೆಂಬಲ ಘೋಷಿಸಿದ ರಾಷ್ಟ್ರೀಯ ಪಕ್ಷದ ಮುಖಂಡರು ಸುಮ್ಮನೆ ಕೂರಲಿಲ್ಲ. ರಾಜಧಾನಿ ಸುತ್ತಲಿನ ಊರುಗಳಲ್ಲಿರುವ ಪಕ್ಷದ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಭಾಗವಹಿಸಬೇಕು. ಪ್ರತಿಯೊಬ್ಬ ಕಾರ್ಯಕರ್ತನೂ ಕನಿಷ್ಠ ಐದು ಜನರನ್ನಾದರೂ ಕರೆತಂದು ಪಾದಯಾತ್ರೆಯನ್ನು ಯಶಸ್ವಿ ಆಗುವಂತೆ ನೋಡಿಕೊಳ್ಳಬೇಕು ಎಂದು ವಿನಂತಿಸಿಕೊಂಡಿತು.

* * *

ಎಲ್ಲಾ ಜಿಲ್ಲೆಗಳಿಂದ ಹೊರಟು ಬಂದ ಸೈಕಲ್ ಜಾಥಾ ತಂಡಗಳು ರಾಜಧಾನಿ ಗಡಿಯಲ್ಲಿರುವ ಶ್ರೀಮಂಗಲಕ್ಕೆ ಬರುವವರಷ್ಟರಲ್ಲಿ ಒಟ್ಟು ಮೂರುಸಾವಿರ ಸೈಕಲ್ ಸವಾರರು ಜಾಥಾದಲ್ಲಿದ್ದರು. ಜಾಥಾಗೆ ರಾಷ್ಟ್ರೀಯ ಪಕ್ಷದ ಕಾರ್ಯಕರ್ತರು ಸ್ವಾಗತ ಕೋರಿದರು. ಹೆದ್ದಾರಿ ಪಕ್ಕದ ಆಟದ ಬಯಲಿನಲ್ಲಿ ಸಂಜೆ ಬಹಿರಂಗ ಸಭೆಗೆ ವ್ಯವಸ್ಥೆ ಆಯಿತು. ಆರು ಗಂಟೆಗೆ ಆರಂಭವಾದ ಸಭೆ ರಾತ್ರಿ ಹತ್ತರ ತನಕ ನಡೆಯಿತು. ಇಪ್ಪತ್ತು ಸಾವಿರ ಜನ ತಾಳ್ಮೆಯಿಂದ ಭಾಷಣ ಕೇಳಿದರು.

ನಾಳೆ ಉಪಾಹಾರದ ನಂತರ ಪಾದಯಾತ್ರೆ ಆರಂಭಿಸುತ್ತೇವೆ. ಯಾತ್ರೆಯನ್ನು ತಡೆಯುವ ಪ್ರಯತ್ನವನ್ನು ಸರ್ಕಾರ ಮಾಡಬಹುದು. ಪಾದಯಾತ್ರಿಗಳ ಜತೆ ಸಮಾಜಘಾತುಕ ವ್ಯಕ್ತಿಗಳು ಸೇರಿಕೊಂಡು ಸಾರ್ವಜನಿಕ ಆಸ್ತಿ ಪಾಸ್ತಿಗೆ ಹಾನಿ ಮಾಡಿ ಯಾತ್ರೆಯನ್ನು ಹಾಳು ಮಾಡುವ ಸಾಧ್ಯತೆ ಇದೆ. ಪಾದಯಾತ್ರಿಗಳು ಸಂಯಮದಿಂದ ಇದ್ದು ಹೋರಾಟವನ್ನು ಯಶಸ್ವಿಗೊಳಿಸಬೇಕು ಎಂದು ಬಹಿರಂಗ ಸಭೆ ಅಧ್ಯಕ್ಷತೆ ವಹಿಸಿದ್ದ ಪ್ರಸಿದ್ಧ ಸಿನಿಮಾ ನಟ ಪ್ರಶಾಂತ್ ರಾಜ್ ಮನವಿ ಮಾಡಿಕೊಂಡರು.